# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 353
2) ಸದಸ್ಯರ ಹೆಸರು : ಶ್ರೀ ಕೆ. ಗೋವಿಂದರಾಜ್
(ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 23-09-2020
4) ಉತ್ತರಿಸಬೇಕಾದ ಸಚಿವರು : ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಯಾವ ಯಾವ ಭಾಗಗಳಲ್ಲಿ ಮೀನುಗಾರಿಕೆ ನಡೆಯುತ್ತಿದೆ; (ಪ್ರದೇಶವಾರು, ಲಭ್ಯ ಪ್ರಮಾಣ ಕುರಿತಾಗಿ ಸಂಪೂರ್ಣ ಮಾಹಿತಿ ಒದಗಿಸುವುದು) | ಕರ್ನಾಟಕ ರಾಜ್ಯವು ಮೂರು ಕರಾವಳಿ ಜಿಲ್ಲೆಗಳನ್ನು ಹೊಂದಿದ್ದು, 320 ಕಿ.ಮೀ. ಉದ್ದದ ಕರಾವಳಿ ತೀರ ಪ್ರದೇಶವನ್ನು ಮತ್ತು 27,000 ಚ.ಕಿ.ಮೀ. ಖಂಡಾವರಣ ಪ್ರದೇಶವನ್ನು (Continental Shelf) ಹೊಂದಿದೆ. ರಾಜ್ಯವು ವಾರ್ಷಿಕ 4.25 ಲಕ್ಷ ಮೆಟ್ರಿಕ್ ಟನ್ನುಗಳ ಕಡಲ ಮೀನು ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದೆ.<br><br>ಇದಲ್ಲದೆ ಒಟ್ಟು 5.60 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣದ ಒಳನಾಡು ಜಲಸಂಪನ್ಮೂಲ ಹೊಂದಿದ್ದು, ಇದರಲ್ಲಿ 2.67 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಪ್ರದೇಶವುಳ್ಳ 82 ಜಲಾಶಯಗಳು, 1.72 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಪ್ರದೇಶವುಳ್ಳ 3823 ದೊಡ್ಡ ಕೆರೆಗಳು, 1.21 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಪ್ರದೇಶವುಳ್ಳ 22624 ಗ್ರಾಮ ಪಂಚಾಯತ್ ಕೆರೆಗಳು ಹಾಗೂ 5813 ಕಿ.ಮೀ.ಗಳಷ್ಟು ಉದ್ದದ ನದಿಗಳು ಸೇರಿವೆ. ಈ ಸಂಪನ್ಮೂಲಗಳು ಮೀನು ಉತ್ಪಾದನೆಗೆ ವಿಪುಲ ಅವಕಾಶವನ್ನು ಒದಗಿಸಿವೆ. ಇದಲ್ಲದೆ ಖಾಸಗಿ ಕ್ಷೇತ್ರದಲ್ಲಿ ಮೀನು ಕೃಷಿ ಕೈಗೊಳ್ಳಲಾಗುತ್ತಿದ್ದು, ಈ ಎಲ್ಲಾ ಒಳನಾಡು ಜಲಸಂಪನ್ಮೂಲಗಳಿಂದ ವಾರ್ಷಿಕ ಸುಮಾರು 4.00 ಲಕ್ಷ ಮೆಟ್ರಿಕ್ ಟನ್ ಮೀನು ಉತ್ಪಾದಿಸಬಹುದಾಗಿರುತ್ತದೆ.<br><br>ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರುವ ಮೀನುಗಾರಿಕೆಗೆ ಸೂಕ್ತವಾಗಿರುವ ಜಲಸಂಪನ್ಮೂಲಗಳಲ್ಲಿ ಮೀನುಗಾರಿಕೆ ನಡೆಯುತ್ತಿರುತ್ತದೆ. 2019-20 ನೇ ಸಾಲಿನಲ್ಲಿ ಒಳನಾಡು ಮೀನುಗಾರಿಕೆಯಿಂದ 2.04 ಲಕ್ಷ ಮೆಟ್ರಿಕ್ ಟನ್ ಹಾಗೂ ಕರಾವಳಿ ಪ್ರದೇಶದಿಂದ ಒಟ್ಟು 4.03 ಲಕ್ಷ ಮೆಟ್ರಿಕ್ ಟನ್ ಮೀನು ಉತ್ಪಾದನೆಯಾಗಿದೆ. ಜಿಲ್ಲಾವಾರು ಒಳನಾಡು ಮೀನು ಉತ್ಪಾದನೆ ವಿವರಗಳನ್ನು **<u>ಅನುಬಂಧ-1</u>** ರಲ್ಲಿ ಮತ್ತು ಕಡಲ ಮೀನು ಉತ್ಪಾದನೆಯನ್ನು **<u>ಅನುಬಂಧ-2</u>** ರಲ್ಲಿ ಒದಗಿಸಲಾಗಿದೆ. |
| ಆ) | ಆಳ ಸಮುದ್ರದ ಮೀನುಗಾರಿಕೆಯಲ್ಲಿ ತೊಡಗಿರುವವರು ಅನುಭವಿಸುತ್ತಿರುವ ಅನಾನುಕೂಲತೆ, ಕಾರ್ಮಿಕರ ಅಲಭ್ಯತೆ ಸಮಸ್ಯೆಗಳ ಬಗ್ಗೆ, ಸರ್ಕಾರ | 1) ಕಡಲ ಮೀನುಗಾರಿಕೆಯು ಅಪಾಯಕಾರಿ ಕಸುಬಾಗಿದ್ದು, ಜೀವಕ್ಕೆ ಅಪಾಯ ಸಂಭವಿಸಲು ಸಾಧ್ಯತೆಗಳು ಜಾಸ್ತಿ ಇರುವಂತಹ ಒಂದು ಕಸುಬಾಗಿರುತ್ತದೆ. ಜೀವ ಹಾನಿ ಸಂಭವಿಸಿದಲ್ಲಿ ಸರ್ಕಾರದಿಂದ ರಾಜ್ಯ ಮಟ್ಟದ ಸಂಕಷ್ಟ ಪರಿಹಾರ ನಿಧಿಯಿಂದ ರೂ.6.00 ಲಕ್ಷಗಳ ಪರಿಹಾರ ಧನವನ್ನು ವಾರಸುದಾರರಿಗೆ ನೀಡುವ ಯೋಜನೆಯು ಚಾಲ್ತಿಯಲ್ಲಿರುತ್ತದೆ. |

| | | |
|---|---|---|
| | ಗಮನಹರಿಸಿದೆಯೇ; ಹಾಗಿದ್ದಲ್ಲಿ, ಈ ಕುರಿತಾಗಿ ಕೈಗೊಂಡ ಪರಿಹಾರಾತ್ಮಕ ಕ್ರಮಗಳೇನು; (ಮಾಹಿತಿ ಒದಗಿಸುವುದು) | 2) ಆಳ ಸಮುದ್ರದಲ್ಲಿ ಮೀನುಗಾರಿಕೆ ಮಾಡುವ ಸಂದರ್ಭದಲ್ಲಿ ಅವಘಡಗಳ ಮಾಹಿತಿಯು ಸಂರಕ್ಷಣಾ ಪಡೆಗೆ ತಕ್ಷಣ ದೊರಕದಿರುವ ಕಾರಣದಿಂದ ಕರಾವಳಿ ಕಾವಲು ಪಡೆಯು ಸೂಕ್ತ ಸಮಯದಲ್ಲಿ ಅವಘಡ ಸಂಭವಿಸಿದ ಸ್ಥಳ ತಲುಪಲು ವಿಳಂಬವಾಗುವ ಸಾಧ್ಯತೆಗಳು ಹೆಚ್ಚಿರುತ್ತದೆ. ಇದರಿಂದ ಮೀನುಗಾರರ ಜೀವ ಹಾನಿಯಾಗುವ ಸಂಭವವಿರುತ್ತದೆ.<br><br>ಈ ಹಿನ್ನೆಲೆಯಲ್ಲಿ, ಸಮುದ್ರದಲ್ಲಿ ವಾತಾವರಣದ ವೈಪರೀತ್ಯಗಳಿರುವ ವೇಳೆ, ಮೀನುಗಾರರ ಜೀವಕ್ಕೆ ಅಪಾಯವಾಗುವ ಸಾಧ್ಯತೆಗಳಿರುವ ಸಂದರ್ಭಗಳಲ್ಲಿ ಸಂರಕ್ಷಣಾ ಪಡೆಗೆ ತಕ್ಷಣ ಮಾಹಿತಿ ರವಾನಿಸಲು ಹಾಗೂ ಅಪಾಯದಲ್ಲಿರುವ ಮೀನುಗಾರರಿಗೆ ಸಂರಕ್ಷಣಾ ಪಡೆಯು ಮಾಹಿತಿ ರವಾನಿಸಲು ಮೀನುಗಾರಿಕೆ ದೋಣಿಗಳಲ್ಲಿ ಒಂದು ಉತ್ತಮವಾದ ದ್ವಿಮುಖ ಸಂವಹನ (Two way communication) ಸಾಧನವನ್ನು ಅಳವಡಿಸಿಕೊಳ್ಳಲು ದೋಣಿಗಳ ಮಾಲೀಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ.<br><br>3) ಆಳಸಮುದ್ರ ಮೀನುಗಾರಿಕೆಯಲ್ಲಿ ತೊಡಗಿರುವವರಿಗೆ ಮುಖ್ಯವಾಗಿ ಶೌಚಾಲಯದ ಸಮಸ್ಯೆ ಇರುತ್ತದೆ. ಇದಕ್ಕಾಗಿ ಪ್ರತಿ ಆಳಸಮುದ್ರಕ್ಕೆ ತೆರಳುವ ಬೋಟುಗಳು ಬಯೋಟಾಯ್ಲೆಟ್ ಅಳವಡಿಸಲು ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಸಹಾಯಧನ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.<br><br>4) ಮೀನುಗಾರರಿಗೆ ಶುದ್ಧವಾದ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವುದು ಅತೀ ಅಗತ್ಯ. ಇದಕ್ಕಾಗಿ ಬೋಟು ಮಾಲೀಕರಿಗೆ ಅಗತ್ಯ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಹಾಗೂ ಮೀನುಗಾರರಿಗೆ ಆಗಿಂದಾಗ್ಗೆ ಆರೋಗ್ಯ ತಪಾಸಣೆ ಮಾಡುವ ಕುರಿತು ಅಗತ್ಯ ಕ್ರಮವಹಿಸಲು ಸೂಚಿಸಲಾಗಿದೆ.<br><br>ಆಳಸಮುದ್ರ ಮೀನುಗಾರಿಕೆಯಲ್ಲಿ ಸಾಕಷ್ಟು ಹೊರರಾಜ್ಯ ಕಾರ್ಮಿಕರು ಕೆಲಸ ಮಾಡುತ್ತಿರುತ್ತಾರೆ. ಕೋವಿಡ್-19 ನಿಂದ ಮೀನುಗಾರಿಕೆ ಕಾರ್ಮಿಕರ ಅಲಭ್ಯತೆ ಸಮಸ್ಯೆಗಳು ಉದ್ಭವಿಸಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆಳಸಮುದ್ರ ಮೀನುಗಾರಿಕೆಯಲ್ಲಿ ಹೊರರಾಜ್ಯದ ಕಾರ್ಮಿಕರೆ ಹೆಚ್ಚಾಗಿರುವುದರಿಂದ ಅವರನ್ನು ಕರೆದು ತರಲು ದೋಣಿಗಳ ಮಾಲೀಕರು ಮೀನುಗಾರಿಕೆ ಸಂಘಟನೆಗಳ ಮೂಲಕ ಕ್ರಮವಹಿಸುತ್ತಿದ್ದಾರೆ. |

| | | |
|---|---|---|
| ಇ) | ಅವೈಜ್ಞಾನಿಕ ನೀತಿ, ಕೇವಲ ಸಾಂಪ್ರದಾಯಕವಲ್ಲದ ವ್ಯಾಪಾರೀಕರಣ ಉದ್ದೇಶದ ಮೀನುಗಾರಿಕೆಯೂ ಈ ಉದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರದ ದೀರ್ಘಾವಧಿ ಯೋಜನೆಗಳು ಏನು? (ಸಂಪುರ್ಣ ಮಾಹಿತಿ ಒದಗಿಸುವುದು) | ಹೌದು. ಈ ನಿಟ್ಟಿನಲ್ಲಿ ಸರ್ಕಾರದಿಂದ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>1) ಅವೈಜ್ಞಾನಿಕ ಮೀನುಗಾರಿಕೆ ಪದ್ಧತಿಗಳಾದ ಬೆಳಕು ಮೀನುಗಾರಿಕೆ, ಬುಲ್‌ಟ್ರಾಲ್ ಮೀನುಗಾರಿಕೆ ಮತ್ತು ಚೌರಿ ಬಳಸಿ ಕಪ್ಪೆಬೊಂಡಾಸ್ ಹಿಡಿಯುವುದನ್ನು ನಿಷೇಧಿಸಿದೆ.<br><br>2) ಮೀನು ಮರಿಗಳನ್ನು ಹಿಡಿಯುವುದನ್ನು ತಪ್ಪಿಸಿ ಮತ್ಸ್ಯ ಸಂಪತ್ತನ್ನು ರಕ್ಷಿಸಲು ಮೀನುಗಾರರಿಗೆ ಕಾಡ್ ಎಂಡ್‌ನಲ್ಲಿ 35 ಎಂಎಂ ಸ್ಕ್ವೇರ್ ಮೆಶ್ ಬಲೆಗಳನ್ನು ಉಚಿತವಾಗಿ ನೀಡಲಾಗಿದೆ.<br><br>3) ಹಿಡುವಳಿ ಮಾಡಬಹುದಾದ ಮೀನಿನ ಕನಿಷ್ಟ ಕಾನೂನಾತ್ಮಕ ಗಾತ್ರ (Minimum Legal Size) ನಿಗದಿಗೊಳಿಸಿ ಸರ್ಕಾರದ ಆದೇಶ ಹೊರಡಿಸಲಾಗಿದೆ.<br><br>4) ಮೀನುಗಾರಿಕೆ ಟ್ರಾಲ್ ದೋಣಿಗಳನ್ನು ಲಾಂಗ್ ಲೈನ್ ದೋಣಿಗಳಾಗಿ ಪರಿವರ್ತಿಸಲು ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದ್ದು, ಇದರಿಂದಾಗಿ ಟ್ರಾಲ್ ದೋಣಿಗಳ ಸಂಖ್ಯೆಯನ್ನು ಕಡಿಮೆಗೊಳಿಸಬಹುದಾಗಿದೆ.<br><br>**5)** ಜವಾಬ್ದಾರಿಯುತ ಮೀನುಗಾರಿಕೆ ಸಂಹಿತೆಯನ್ನು ಅಳವಡಿಸಿಕೊಳ್ಳಲು ಜಾಗೃತಿ ಮೂಡಿಸಲಾಗುತ್ತಿದೆ.<br><br>ಸಾಂಪ್ರದಾಯಿಕವಲ್ಲದ ವ್ಯಾಪಾರೀಕರಣ ಉದ್ದೇಶದ ಮೀನುಗಾರಿಕೆಯನ್ನು ನಿಯಂತ್ರಿಸುವ ದೃಷ್ಟಿಯಿಂದ ಪ್ರಸ್ತುತ ಬೋಟು ನಿರ್ಮಾಣಕ್ಕೆ ನೀಡಲಾಗುವ ಸಾಧ್ಯತಾ ಪತ್ರ ಹಂಚಿಕೆಯನ್ನು ತಡೆಹಿಡಿಯಲಾಗಿದೆ. |

ಸಂಖ್ಯೆ: ಪಸಂಮೀ ಇ-168 ಮೀಇಯೋ 2020

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ, ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚು
ಗುರುತಿಲ್ಲದ ಪ್ರಶ್ನೆ ಸಂಖ್ಯೆ: 353 ರ

## ಅನುಬಂಧ-1

### 2019 -20 ನೇ ಸಾಲಿನ ಒಳನಾಡು ಮೀನು ಉತ್ಪಾದನೆ

ಪ್ರಮಾಣ: ಮೆ.ಟನ್

| ಜಿಲ್ಲೆ | ಅ. ಜಲಕೃಷಿಯಿಂದ ಉತ್ಪಾದನೆ | | | | | | ಆ. ನೈಸರ್ಗಿಕ ಉತ್ಪಾದನೆ | | | | | | | | ಒಟ್ಟು ಒಳನಾಡು ಉತ್ಪಾದನೆ |
|---|---|---|---|---|---|---|---|---|---|---|---|---|---|---|---|
| | ಜಲಾಶಯ | ದೊಡ್ಡ ಕೆರೆಗಳು | ಸಣ್ಣ ಕೆರೆಗಳು | ಖಾಸಗಿ | ಹಿನ್ನೀರು ಕೃಷಿ | ಒಟ್ಟು | ಸಣ್ಣ ಕೆರೆಗಳು | ದೊಡ್ಡ ಕೆರೆಗಳು | ಸಣ್ಣ ಜಲಾಶಯ | ದೊಡ್ಡ ಜಲಾಶಯ | ಜೌಗು ಚೌಳು ಪ್ರದೇಶ | ನದಿ ಭಾಗ | ಅಳಿವೆ | ಒಟ್ಟು | |
| ಬಾಗಲಕೋಟೆ | 0.00 | 508.00 | 188.28 | 93.60 | 0.00 | 789.88 | 0.56 | 40.27 | 0.00 | 0.00 | 0.00 | 30.90 | 0.00 | 71.73 | 861.6 |
| ಬೆಂಗಳೂರು ಗ್ರಾ | 137.00 | 4407.20 | 687.96 | 72.80 | 0.00 | 5304.96 | 23.28 | 113.99 | 0.00 | 62.69 | 0.09 | 0.00 | 0.00 | 200.06 | 5505.0 |
| ಬೆಂಗಳೂರು ನಗರ | 0.00 | 1697.26 | 321.48 | 100.80 | 0.00 | 2119.54 | 22.18 | 123.23 | 0.00 | 0.00 | 0.20 | 9.30 | 0.00 | 154.92 | 2274.4 |
| ಬೆಳಗಾವಿ | 1245.67 | 2189.56 | 236.88 | 1011.20 | 0.00 | 4683.30 | 4.69 | 69.07 | 14.76 | 600.97 | 2.96 | 40.65 | 0.00 | 733.09 | 5416.3 |
| ಬಳ್ಳಾರಿ | 163.10 | 3293.38 | 961.20 | 4960.00 | 0.00 | 9377.68 | 10.53 | 169.56 | 6.30 | 1076.30 | 3.19 | 24.15 | 0.00 | 1290.03 | 10667.7 |
| ಬೀದರ್ | 272.50 | 756.00 | 21.60 | 800.00 | 0.00 | 1850.10 | 1.99 | 46.49 | 6.23 | 173.04 | 0.31 | 17.85 | 0.00 | 245.92 | 2096.0 |
| ಬಿಜಾಪುರ | 2075.73 | 3030.94 | 162.00 | 0.00 | 0.00 | 5268.68 | 0.08 | 121.47 | 0.00 | 1669.55 | 3.55 | 34.05 | 0.00 | 1828.69 | 7097.3 |
| ಚಾಮರಾಜನಗರ | 0.00 | 3610.77 | 249.84 | 20.80 | 0.00 | 3881.41 | 6.06 | 114.08 | 19.91 | 0.00 | 0.00 | 32.70 | 0.00 | 172.75 | 4054.1 |
| ಚಿಕ್ಕಮಗಳೂರು | 831.74 | 2345.73 | 165.96 | 528.00 | 0.00 | 3871.43 | 18.38 | 84.05 | 3.71 | 303.75 | 1.98 | 23.70 | 0.00 | 435.57 | 4307.0 |
| ಚಿತ್ರದುರ್ಗಾ | 893.67 | 4250.93 | 572.40 | 203.20 | 0.00 | 5920.20 | 15.73 | 364.31 | 7.20 | 254.69 | 3.28 | 16.35 | 0.00 | 661.57 | 6581.7 |
| ದಕ್ಷಿಣ ಕನ್ನಡ | 0.00 | 0.00 | 18.36 | 112.80 | 2318.00 | 2449.16 | 0.14 | 0.00 | 0.00 | 0.00 | 4.33 | 57.00 | 855.00 | 916.47 | 3365.6 |
| ದಾವಣಗೆರೆ | 401.34 | 3867.08 | 476.28 | 225.60 | 0.00 | 4970.30 | 13.58 | 147.99 | 0.00 | 97.88 | 0.00 | 17.25 | 0.00 | 276.69 | 5246.9 |
| ಧಾರವಾಡ | 46.55 | 2587.35 | 349.20 | 220.00 | 0.00 | 3203.10 | 6.40 | 35.21 | 11.03 | 0.00 | 2.46 | 0.00 | 0.00 | 55.10 | 3258.1 |
| ಗದಗ | 0.00 | 766.07 | 16.20 | 12.80 | 0.00 | 795.07 | 2.45 | 32.48 | 0.00 | 0.00 | 0.00 | 3.75 | 0.00 | 38.68 | 833.7 |
| ಗುಲ್ಬರ್ಗಾ | 182.75 | 3520.40 | 900.00 | 640.00 | 0.00 | 5243.15 | 17.96 | 62.15 | 8.01 | 147.10 | 1.31 | 60.75 | 0.00 | 297.26 | 5540.41 |
| ಹಾಸನ | 927.85 | 8994.58 | 1632.96 | 733.60 | 0.00 | 12288.99 | 52.80 | 192.72 | 0.00 | 316.52 | 1.15 | 45.15 | 0.00 | 608.34 | 12897.33 |
| ಹಾವೇರಿ | 0.00 | 2181.43 | 1182.24 | 76.80 | 0.00 | 3440.47 | 19.39 | 116.43 | 4.12 | 0.00 | 0.00 | 0.00 | 0.00 | 139.94 | 3580.42 |
| ಕೊಡಗು | 33.66 | 642.44 | 28.80 | 2661.60 | 0.00 | 3366.50 | 3.38 | 0.36 | 2.36 | 50.92 | 0.00 | 31.65 | 0.00 | 88.67 | 3455.17 |
| ಕೋಲಾರ | 83.70 | 1372.36 | 66.60 | 107.20 | 0.00 | 1629.86 | 79.86 | 226.70 | 10.62 | 0.00 | 0.47 | 2.70 | 0.00 | 320.35 | 1950.20 |
| ಕೊಪ್ಪಳ | 354.60 | 1957.11 | 439.92 | 672.80 | 0.00 | 3424.43 | 1.64 | 45.88 | 8.91 | 33.67 | 0.00 | 12.00 | 0.00 | 102.10 | 3526.53 |
| ಮಂಡ್ಯ | 949.75 | 16022.48 | 1457.64 | 3669.60 | 0.00 | 22099.47 | 15.93 | 232.67 | 11.14 | 348.95 | 2.99 | 44.85 | 0.00 | 656.52 | 22755.98 |
| ಮೈಸೂರು | 0.00 | 7376.34 | 1700.64 | 1036.00 | 0.00 | 10112.98 | 19.76 | 84.63 | 0.00 | 231.80 | 6.55 | 76.35 | 0.00 | 419.08 | 10532.07 |
| ರಾಯಚೂರು | 0.00 | 4135.81 | 180.00 | 7384.00 | 0.00 | 11699.81 | 6.51 | 60.84 | 14.96 | 0.00 | 18.80 | 41.25 | 0.00 | 142.37 | 11842.18 |
| ಶಿವಮೊಗ್ಗ | 4594.03 | 14297.86 | 3123.00 | 1612.00 | 0.00 | 23626.89 | 18.22 | 120.67 | 3.24 | 1063.75 | 4.17 | 52.20 | 0.00 | 1262.25 | 24889.14 |
| ತುಮಕೂರು | 306.40 | 10467.22 | 1395.36 | 224.80 | 0.00 | 12393.78 | 69.15 | 634.50 | 8.91 | 72.41 | 0.38 | 43.50 | 0.00 | 828.85 | 13222.63 |
| ಉಡುಪಿ | 0.00 | 116.76 | 18.72 | 84.00 | 1446.00 | 1665.48 | 0.14 | 1.16 | 0.00 | 0.00 | 0.00 | 44.25 | 1413.75 | 1459.30 | 3124.78 |
| ಉತ್ತರ ಕನ್ನಡ | 95.58 | 1992.45 | 530.28 | 307.20 | 6240.70 | 9166.21 | 10.46 | 22.95 | 0.00 | 620.51 | 4.23 | 50.25 | 3141.75 | 3850.16 | 13016.36 |
| ಚಿಕ್ಕಬಳ್ಳಾಪುರ | 0.00 | 1746.48 | 158.40 | 43.20 | 0.00 | 1948.08 | 32.47 | 231.11 | 0.00 | 0.00 | 0.10 | 24.00 | 0.00 | 287.68 | 2235.76 |
| ರಾಮನಗರ | 0.00 | 4768.93 | 1685.16 | 338.40 | 0.00 | 6792.49 | 12.39 | 82.49 | 14.96 | 32.21 | 0.60 | 3.00 | 0.00 | 145.66 | 6938.15 |
| ಯಾದಗಿರಿ | 0.00 | 1914.80 | 324.00 | 128.00 | 0.00 | 2366.80 | 0.00 | 54.16 | 5.52 | 0.00 | 0.00 | 38.40 | 0.00 | 98.07 | 2464.87 |
| ಒಟ್ಟು | 13595.60 | 114817.71 | 19251.36 | 28080.80 | 10004.70 | 185750.18 | 486.14 | 3631.63 | 161.89 | 7156.70 | 63.09 | 877.95 | 5410.50 | 17787.89 | 203538.07 |

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 353 ರ

## ಅನುಬಂಧ - 2

### 2019-20 ನೇ ಸಾಲಿನ ಕರಾವಳಿ ಮೀನು ಉತ್ಪಾದನೆ

ಪ್ರಮಾಣ: ಮೆ.ಟನ್

| ಜಿಲ್ಲೆ | ಕಡಲ ಮೀನು ಉತ್ಪಾದನೆ |
|---|---|
| ದಕ್ಷಿಣ ಕನ್ನಡ | 179944.00 |
| ಉಡುಪಿ | 121479.00 |
| ಉತ್ತರ ಕನ್ನಡ | 101944.55 |
| ಒಟ್ಟು ಉತ್ಪಾದನೆ | **403367.55** |